**O. S. No:217/2024**
**PW**:2

(ಇಂದು ದಿನಾಂಕಃ **24-10-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಶ್ರೀ ಕೆ ಆರ್ ಎಂ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ನಿಜ ಇರುತ್ತವೆ.

**ಪಾಟೀ ಸವಾಲುಃ ಶ್ರೀ ಕೆ ಎನ್ ಕೆ ವಕೀಲರಿಂದಃ**

ನಾನು ಅಣ್ಣಿಗೇರಿಯ ನಿವಾಸಿ. ನನ್ನ ಹೆಂಡತಿಯ ಊರು ಅಣ್ಣಿಗೇರಿ. ನನ್ನ ತಾಯಿಯ ತವರೂರು ಅಣ್ಣಿಗೇರಿ. ಸದರಿ ವಿಷಯ ಸುಳ್ಳು ಹೇಳುತ್ತಿದ್ದು, ನಾವು ಕುಂದಗೋಳದಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. ಕುಂದಗೋಳದ ಹೊಂಡದಕಟ್ಟಿ ಓಣಿಯಲ್ಲಿ ನಮ್ಮ ಮನೆ ಇರುತ್ತದೆ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿಯರು 2 ನೇ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ. ದಾವಾ ಜಮೀನುಗಳು ಸರ್ವೇ ನಂಃ 258 ಕ್ಷೇತ್ರ 5 ಎಕರೆ 1 ಗುಂಟೆ ಹಾಗೂ ಸರ್ವೇ ನಂಃ 20 ರಲ್ಲಿ 3 ಹಿಸ್ಸೆಗಳಿದ್ದು ಅವುಗಳ ಕ್ಷೇತ್ರ 1 ಎಕರೆ 29 ಗುಂಟೆ, 1 ಎಕರೆ 27 ಗುಂಟೆ ಹಾಗೂ 4 ಗುಂಟೆ ಇರುತ್ತವೆ. 1 ನೇ ವಾದಿ ನನ್ನ ಹೆಂಡತಿಯ ತಂಗಿ. 1 ನೇ ಪ್ರತಿವಾದಿ ನನ್ನ ತಮ್ಮ. ಈಗ ವಾದಿಯರು ಹಾಗೂ 1 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಿರುತ್ತಾರೆ. 1 ನೇ ಪ್ರತಿವಾದಿ ಆಗಾಗ ಹೊಂದಾಣಿಕೆ ಇರದೇ ಇರುತ್ತಾರೆ. ಸಾಕ್ಷಿಯು ಮುಂದುವರೆದು ಈ ಹಿಂದೆ ವಾದಿಯರು ಪ್ರತ್ಯೇಕವಾಗಿ ಅಣ್ಣಿಗೇರಿಯಲ್ಲಿ ವಾಸವಿದ್ದರು ಎಂದು ನುಡಿದಿರುತ್ತಾರೆ. 1 ನೇ ವಾದಿ 1 ನೇ ಪ್ರತಿವಾದಿಯ ವಿರುದ್ಧ ಜೀವನಾಂಶ ಕೋರಿ ಕ್ರಿ. ಮಿ. ಸಂಃ 270/2024 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯಲ್ಲಿ 1 ನೇ ವಾದಿ ಹಾಗೂ 1 ನೇ ಪ್ರತಿವಾದಿ ಈಗ 4-5 ದಿನಗಳ ಹಿಂದೆ ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ 2 ಮಕ್ಕಳಾದ ಬಳಿಕ ಈಗ 2-3 ವರ್ಷಗಳ ಹಿಂದೆ ಮದ್ಯ ಸೇವಿಸಲು ಪ್ರಾರಂಭಿಸಿರುತ್ತಾನೆ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ ಸಂಃ 3 ರಿಂದ 5 ರಲ್ಲಿಯ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯಿಂದ ಜಮೀನು ಸರ್ವೇ ನಂಃ 258/1 ಕ್ಷೇತ್ರ 5 ಎಕರೆ 1 ಗುಂಟೆ ಜಮೀನನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಆಗಿನ ಮಾರುಕಟ್ಟೆಯ ಬೆಲೆಗೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರಕ್ಕೆ 1 ನೇ ವಾದಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ತನ್ನ ಮಕ್ಕಳ ಹೆಸರಿನಲ್ಲಿ ಜಮೀನನ್ನು ವರ್ಗಾವಣೆ ಮಾಡುವುದಾಗಿ ತಿಳಿಸಿ ಮನೆಯಲ್ಲಿಯೇ 1 ನೇ ವಾದಿಯ ಸಹಿಯನ್ನು ಪಡೆದುಕೊಂಡಿರುತ್ತಾನೆ ಎಂದು ನುಡಿದಿರುತ್ತಾರೆ.

1 ನೇ ಪ್ರತಿವಾದಿಗೆ ಇಬ್ಬರು ಸಹೋದರರು. 1 ನೇ ಪ್ರತಿವಾದಿ ಹಾಗೂ ಆತನ ಹೆಂಡತಿ ಮಕ್ಕಳು ಒಂದು ಮನೆಯಲ್ಲಿ ವಾಸವಿದ್ದು, ಆತನ ಸಹೋದರರು ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಬೇರೆ ಯಾವುದೇ ನೌಕರಿ ಅಥವಾ ವ್ಯವಹಾರಗಳು ಇರುವುದಿಲ್ಲ. 1 ನೇ ವಾದಿಯ ಮದುವೆಯಾಗಿ ಅಂದಾಜು 15 ವರ್ಷವಾಗಿರುತ್ತದೆ. 1 ನೇ ಪ್ರತಿವಾದಿ ಮದ್ಯಪಾನ ಮಾಡಲು ಪ್ರಾರಂಭಿಸುವುದಕ್ಕಿಂತ ಮುಂಚೆ ಮನೆತನವನ್ನು ನೋಡಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಾನು ಮದುವೆಯಾದಾಗಿನಿಂದ ಕುಟುಂಬವನ್ನು ಉತ್ತಮವಾಗಿ ನಿರ್ವಹಣೆ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ಕಾರಣ 1 ನೇ ಪ್ರತಿವಾದಿ ಕುಟುಂಬದ ಅಡಚಣೆಗಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜಮೀನು ಸರ್ವೇ ನಂಃ 258/1 ನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿ ಬಂದ ರೂ.10,05,000/- ಹಣವನ್ನು ಕುಟುಂಬದ ಅಡಚಣೆಗಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಕಾರಣ 1 ನೇ ವಾದಿಗೆ ಸಹಾಯವಾಗಲು ಮತ್ತು 2 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಖರೀದಿ ಆದಾಗಿನಿಂದ 2 ನೇ ಪ್ರತಿವಾದಿ ಸದರಿ ಜಮೀನಿನ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಕೊಂಗವಾಡ ಹಾಗೂ ಅಣ್ಣಿಗೇರಿ ಗ್ರಾಮಗಳಲ್ಲಿ ನಾನು ವಾಸವಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**